ಹೊಲಿಯೋದು ಕಲ್ತುಕೊಂಡಿದಾರೆ.. ಅದರಲ್ಲಿ ಸಂಸಾರ ನಡೆಸೋವಷ್ಟು ಸಂಪಾದನೆ ಆಗ್ತಾ ಇಲ್ಲಾ.. ಜೊತೆಗೆ ನಮ್ಮ ತಂದೆಯವರ ಆಸ್ಪತ್ರೆ ಖರ್ಚು ನೋಡ್ಕೋಬೇಕು.. ಅದಕ್ಕೆ ನಮ್ಮ ತಾಯಿಗೆ ಸ್ವಲ್ಪ ಸಹಾಯ ಆಗಲಿ ಅಂತ ಓದೋದು ಬಿಟ್ಟುಬಿಟ್ಟು ನಾನೂ ಕೆಲಸಕ್ಕೆ ಹೋಗ್ತಾ ಇದೀನಿ..'

ನನಗೆ ಅವಳ ಮಾತಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಹೌದಾ ಎನ್ನುವಂತೆ ತಲೆಯಾಡಿಸಿದೆ. ಆ ಕ್ಷಣದಲ್ಲಿ ಅವಳ ಬಗ್ಗೆ ನನ್ನ ಮನಸಿನಾಳದಲ್ಲಿ ಮಾನವ ಸಹಜವಾದ ಅನುಕಂಪವೊಂದು ಮೂಡಿ ನಿಂತಿತ್ತು.

'ನಾನು ಕೆಂಗೇರಿನಲ್ಲಿ ರೂಮು ಮಾಡ್ಕೊಂಡಿದೀನಿ.. ಶನಿವಾರ ಸಾಯಂಕಾಲ ಊರಿಗೆ ಬಂದು ನಮ್ಮ ಅಪ್ಪ ಅಮ್ಮನ್ನ ನೋಡ್ಕಂಡು ಸೋಮವಾರ ಬೆಳಿಗ್ಗೆ ಹೋಗ್ತೀನಿ.. ನೀವು ಡೈಲಿ ಟ್ರಾವೆಲ್ ಮಾಡ್ತೀರಾ ಸಾರ್..?'

'ಇಲ್ಲಾ.. ವಾರಕ್ಕೊಂದು ಸರ್ತಿ ಅಷ್ಟೇ..' ಮೊಟಕಾಗಿ ಉತ್ತರಿಸಿ ಕಿಟಕಿಯತ್ತ ಮುಖ ತಿರುಗಿಸಿ ಕುಳಿತೆ. ಮತ್ತೆ ನಮ್ಮಿಬ್ಬರ ನಡುವೆ ಐದು ನಿಮಿಷಗಳ ಮೌನ ಕವಿಯಿತು.

'ಮದುವೆಯಾಗಿದೆಯಾ ಸಾರ್..?' ಹುಡುಗಿ ಮೆಲ್ಲನೆ ಕೇಳಿದಳು.

ನಾನು ಸಾಮಾನ್ಯವಾಗಿ ನನ್ನ ವೈಯುಕ್ತಿಕ ವಿಷಯಗಳನ್ನು ಯಾರ ಬಳಿಯಲ್ಲಿಯೂ ಹಂಚಿಕೊಳ್ಳಲು ಇಷ್ಟಪಡುವುದಿಲ್ಲ. ಆದರೆ ನನಗೆ ಅವಳೊಬ್ಬ ಮುಗ್ಧ ಹುಡುಗಿ ಮತ್ತು ಅವಳ ಮಾತುಗಳಲ್ಲಿ ಪ್ರಾಮಾಣಿಕತೆ ಅಡಗಿದೆ ಎಂಬುದು ಖಚಿತವಾಗಿತ್ತು.

'ಇನ್ನೂ ಇಲ್ಲಾ..' ಎಂದು ಅವಳತ್ತ ತಿರುಗಿ ಮತ್ತೊಂದು ಮುಗುಳ್ನಗೆ ಬೀರಿದೆ.

'ಮತ್ತೆ ನೀವೇ ಅಡುಗೆ ಮಾಡ್ಕೋತೀರಾ..?' ಎಂದವಳು ತುಸುವೇ ಬಾಯಿ ತೆರೆದು ಸಣ್ಣದಾಗಿ ನಕ್ಕಳು. ಅವಳ ಕೆನ್ನೆಗಳಲ್ಲಿ ಬಿದ್ದ ಗುಳಿಗಳು ಅರಳಿದ ಮಲ್ಲಿಗೆಯಂತೆ ಗೋಚರಿಸಿದವು. ಅಚ್ಚ ಬಿಳಿ ಬಣ್ಣದ ದಂತಪಂಕ್ತಿಗಳು ನನ್ನ ಕಣ್ಣಿನ ಕ್ಯಾಮೆರಾದಲ್ಲಿ ಸೆರೆಯಾದವು.

'ಇಲ್ಲಾ.. ಬೆಳಗ್ಗೆ ತಿಂಡಿ, ಮಧ್ಯಾಹ್ನ ಊಟ ನಮ್ಮ ಫ್ಯಾಕ್ಟರಿ ಕ್ಯಾಂಟೀನಿನಲ್ಲಿ ಆಗುತ್ತೆ.. ರಾತ್ರಿ ಊಟ ಮಾತ್ರ ಹೋಟೇಲಿನಲ್ಲಿ..' ಎಂದು ನಿಜವನ್ನೇ ನುಡಿದೆ.

'ಓ ಹೌದಾ..' ಎಂದವಳು ಮತ್ತೆ ಮಾತನಾಡಲಿಲ್ಲ. ತನ್ನ ಎರಡೂ ಕೈಗಳನ್ನು ತೊಡೆಯ ಮೇಲಿದ್ದ ಕಂದು ವ್ಯಾನಿಟಿ ಬ್ಯಾಗಿನ ಮೇಲೆ ಇಟ್ಟುಕೊಂಡು ಸೀಟಿನ ಹಿಂದಕ್ಕೆ ತಲೆಯನ್ನು ಒರಗಿಸಿಕೊಂಡು ಕಣ್ಣು ಮುಚ್ಚಿದಳು. ಸದ್ಯ ಹುಡುಗಿ ಮಾತು ನಿಲ್ಲಿಸಿದಳು ಎಂದುಕೊಂಡು ನನಗೆ ನಿರಾಳವಾಯಿತು. ಮತ್ತೆ ಕಿಟಕಿಯ ಹೊರಗೆ ನೋಡುತ್ತಾ ಕುಳಿತೆ.

ಹುಡುಗಿ ಯಾವಾಗ ಕಣ್ಣುಬಿಟ್ಟಳೋ ತಿಳಿಯಲಿಲ್ಲ. ಬಸ್ಸು ಕೆಂಗೇರಿಯನ್ನು ಸಮೀಪಿಸುತಿದ್ದಂತೆ ರಸ್ತೆಯ ಬದಿಯಲ್ಲಿ ಏಂಜೆಲ್ಸ್ ಗಾರ್ಮೆಂಟ್ಸ್ ಎಂಬ ಇಂಗ್ಲಿಷಿನ ನಾಮಫಲಕ ಕಣ್ಣಿಗೆ ಬಿತ್ತು.

'ಸಾರ್ ಸಾರ್.. ಇದೇ ಸಾರ್ ನಮ್ಮ ಗಾರ್ಮೆಂಟ್ಸ್ ಫ್ಯಾಕ್ಟರಿ..' ಎಂದು ಹುಡುಗಿ ಕುಳಿತಲ್ಲಿಂದ ಎದ್ದು ತೊಡೆಯ ಮೇಲಿದ್ದ ಕಂದು ಬಣ್ಣದ ವ್ಯಾನಿಟಿ ಬ್ಯಾಗನ್ನು ಬಗಲಿಗೇರಿಸಿಕೊಂಡಳು. ನಾನು ಓಕೆ ಓಕೆ.. ಎಂದು ನನಗರಿವಿಲ್ಲದಂತೆ ಉದ್ಗರಿಸಿದೆ.

'ನಮ್ಮ ಸ್ಟಾಪು ಬಂತು ಸಾರ್ ಬರ್ತೀನಿ.. ಮುಂದಿನ ವಾರ ಸಿಗೋಣ ಸಾರ್..' ಎಂದು ಮುಗುಳ್ನಕ್ಕಳು. ಓಕೆ ಬೈ.. ಎಂದು ವಿದಾಯ ಹೇಳಿ ನಾನು ಮುಗುಳ್ನಕ್ಕೆ. ಬಸ್ಸು ಇಳಿಯಲೆಂದು ತುಸು ಮುಂದೆ ಹೋದವಳು ಪುನಃ ವಾಪಾಸು ಬಂದು 'ಸಾರ್ ನಿಮ್ಮ ವಿಸಿಟಿಂಗ್ ಕಾರ್ಡ್ ಇದ್ದರೆ ಕೊಡ್ತೀರಾ..' ಎಂದು ಅಲವತ್ತುಕೊಂಡಳು. ನಾನು ನನ್ನ ಕಾರ್ಖಾನೆಯ ವ್ಯವಹಾರಕ್ಕೆ ಸಂಬಂಧಪಟ್ಟ ವ್ಯಕ್ತಿಗಳಿಗೆ ಬಿಟ್ಟು ಬೇರೆ ಯಾರಿಗೂ ನನ್ನ ವಿಸಿಟಿಂಗ್ ಕಾರ್ಡ್ ಕೊಡುತ್ತಿರಲಿಲ್ಲ. ಆದರೆ ಹುಡುಗಿಯನ್ನು ನಿರಾಸೆಗೊಳಿಸಲು ಮನಸ್ಸು ಒಪ್ಪಲಿಲ್ಲ. ಪರ್ಸ್‌ನಲ್ಲಿದ್ದ ವಿಸಿಟಿಂಗ್ ಕಾರ್ಡ್ ಒಂದನ್ನು ತೆಗೆದು ಕೊಟ್ಟೆ. ಅದು ನಾನು ಮಾಡಿದ ಎರಡನೆಯ ತಪ್ಪು.

'ತುಂಬಾ ಥ್ಯಾಂಕ್ಸ್ ಸಾರ್..' ಎಂದು ಬಾಯಿ ತುಂಬಾ ನುಡಿದು ಬಸ್ಸು ಇಳಿಯಲು ತರಾತುರಿಯಿಂದ ಬಾಗಿಲ ಬಳಿ ನಡೆದಳು. ಬಸ್ಸು ಕೆಂಗೇರಿಯ ಬಸ್ಸು ನಿಲ್ದಾಣದಲ್ಲಿ ನಿಂತಿತು. ನಾನು ಕಿಟಕಿಯ ಹೊರಗೆ ನೋಡುತಿದ್ದೆ. ಬಸ್ಸು ಇಳಿದು ಓಡೋಡಿ ಬಂದು ಕಿಟಕಿಯ ಬಳಿ ನಿಂತು ಕೈಬೀಸಿದಳು. ನಾನೇನೂ ಪ್ರತಿಕ್ರಿಯೆ ನೀಡಲಿಲ್ಲ. ಬಸ್ಸು ನಿಧಾನವಾಗಿ ಅಲ್ಲಿಂದ ಮುಂದೆ ಸಾಗಿತು. ಅವಳು ಅಲ್ಲಿಯೇ ನಿಂತಿದ್ದಳು. ಅವಳ ಎತ್ತರದ ನಿಲುವು, ಎದೆಯ ಮೇಲೆ ಹೊದ್ದಿದ್ದ ಬಿಳಿಯ ದುಪಟ್ಟಾ ಮತ್ತು ದೇಹವನ್ನು ಅಪ್ಪಿದ್ದ ಗಿಣಿ ಹಸಿರು ಬಣ್ಣದ ಟಾಪ್, ಬಿಳಿಯ ಪ್ಯಾಂಟಿನ ಚೂಡಿದಾರದಲ್ಲಿ ಅವಳ ಸುಪುಷ್ಟ ಮೈಮಾಟಗಳು ಆಗಲೇ ದಿಗಂತದಿಂದ ಮೇಲೇರಿ ನಿಂತಿದ್ದ ಸೂರ್ಯನ ಬಿಳಿಯ ಬೆಳಕಿನಲ್ಲಿ ನಿಚ್ಚಳವಾಗಿ ಕಾಣಿಸಿದವು.

ಆದರೆ ಒಂದು ಸುಂದರ ಹುಡುಗಿಯನ್ನು ಕಂಡಾಗ ನನ್ನಂತಹ ಯುವಕನೊಬ್ಬನಲ್ಲಿ ಮೂಡಬಹುದಾದ ಪ್ರಕೃತಿದತ್ತವಾದ ಆಕರ್ಷಣೀಯ ಭಾವನೆಗಳು ನನ್ನ ಮನದಲ್ಲಿ ಮೂಡಲೇ ಇಲ್ಲ. ಅವಳೊಬ್ಬ ಹಮ್ಮುಬಿಮ್ಮುಗಳಿಲ್ಲದ ಮುಗ್ಧ ಸುಂದರ ಹುಡುಗಿ ಎಂಬ ಅಭಿಪ್ರಾಯ ಮಾತ್ರ ನನ್ನ ಮನದ ತುಂಬಾ ತುಂಬಿಕೊಂಡಿತ್ತು.

ಇದಾದ ಮೇಲೆ ಸುಮಾರು ಒಂದು ವರ್ಷ ನನ್ನ ಬದುಕಿನಲ್ಲಿ ಸಂಭವಿಸಿದ ಘಟನೆಗಳು ಈ ಹೇಮಾವತಿ ಎಂಬ ಹುಡುಗಿಯೊಂದಿಗಿನ ಮೊದಲ ಪ್ರಯಾಣದ ಪ್ರತಿಫಲಗಳು. ನನ್ನ ಬಗೆಗೆ ಏಕಮುಖ ಬಾಲಿಶ ಪ್ರೀತಿಯೊಂದನ್ನು ಹೃದಯದಲ್ಲಿ ಬೆಳೆಸಿಕೊಂಡ ಆ ಹುಡುಗಿಯ ಚೆಲ್ಲಾಟಗಳು ಮತ್ತು ಹುಚ್ಚಾಟಗಳೆಲ್ಲಾ ನಾನೇ ತಂದುಕೊಂಡ ಆತಂಕಗಳು. ಹಗ್ಗವನ್ನು ಕೊಟ್ಟು ಬಿಗಿಸಿಕೊಂಡ ಹಾಗೆ.

ನನಗೂ ಹೀಗೆಲ್ಲಾ ಆಗುತ್ತದೆಂದು ತಿಳಿದಿರಲಿಲ್ಲ.

ಮೊದಲ ಪ್ರಯಾಣದ ನಂತರ ಮುಂದಿನ ವಾರ ನಾನು ಪ್ರಯಾಣಿಸುತ್ತಿದ್ದ ಮೈಸೂರು–ತಿರುಪತಿ ಬಸ್ಸಿಗೆ ಮದ್ದೂರಿನಲ್ಲಿ ಅವಳು ಮತ್ತೆ ಹತ್ತಿದಳು. ಅದೃಷ್ಟವಶಾತ್ ನನ್ನ ಪಕ್ಕದ ಸೀಟಿನಲ್ಲಿ ಹಿರಿಯರೊಬ್ಬರು ಕುಳಿತಿದ್ದರು. ಬಸ್ಸಿನ ಹಿಂದಿನ ಸೀಟುಗಳು ಮಾತ್ರ ಖಾಲಿ ಇದ್ದವು. ಮುಂದೆ ಬಂದು ನೋಡಿ 'ಹೇಗಿದೀರಾ ಸಾರ್..' ಎಂದು ಕೇಳಿ ಮಾತನಾಡಿಸಿ ಹಿಂದಿನ ಸೀಟಿಗೆ ಹೋಗಿ ಕುಳಿತಳು. ಕೆಂಗೇರಿಯಲ್ಲಿ ಬಸ್ಸು ಇಳಿದಾದ ಮೇಲೆ ಕಿಟಕಿಯ ಬಳಿ ಓಡೋಡಿ ಬಂದು ಕೈಬೀಸಿದಳು. ಬಸ್ಸು ಮುಂದೆ ಸಾಗುವವರೆಗೆ ಅಲ್ಲಿಯೇ ನಿಂತಿದ್ದಳು.

ನನ್ನ ಪಕ್ಕದಲ್ಲಿ ಸೀಟು ಖಾಲಿಯಿದ್ದರೆ ಮಾತ್ರ ಕುಳಿತುಕೊಳ್ಳುವುದು, ಲೋಕಾಭಿರಾಮವಾಗಿ ಒಂದೆರಡು ಮಾತನಾಡುವುದು, ಸೀಟು ಖಾಲಿ ಇಲ್ಲವಾದರೆ ನಾನು ಕುಳಿತಲ್ಲಿಗೆ ಬಂದು ಮಾತನಾಡಿಸಿಕೊಂಡು ಹೋಗುವುದು, ಇದು ಐದಾರು ವಾರಗಳ ಕಾಲ ಪುನರಾವರ್ತಿತವಾಯಿತು. ಅಷ್ಟರಲ್ಲಿ ಆಗಿದ್ದ ಒಂದೇ ಒಂದು ಬದಲಾವಣೆ ಎಂದರೆ ನನ್ನನ್ನು ಸಾರ್ ಎಂಬ ವಿಶೇಷಣವನ್ನು ಬಳಸಿ ಮಾತನಾಡಿಸುವುದು ನಿಂತು 'ನೀವು ಹೇಗಿದ್ದೀರಾ.. ಮನೆಯಲ್ಲಿ ನಿಮ್ಮ ತಂದೆತಾಯಿ ಆರಾಮವಾಗಿದ್ದಾರಾ.. ನಿಮ್ಮ ಕಾರ್ಖಾನೆಯ ಕೆಲಸ ಹೇಗಿದೆ..?' ಎಂದು ಬಹುದಿನಗಳ ಪರಿಚಯವೇನೋ ಎಂಬಂತೆ ಮಾತನಾಡತೊಡಗಿದಳು. ನಾನೂ ಅದರ ಬಗ್ಗೆ ಅಷ್ಟೇನೂ ತಲೆ ಕೆಡಿಸಿಕೊಳ್ಳದೆ ಚುಟುಕಾಗಿ ಉತ್ತರಿಸುತ್ತಿದ್ದೆ.

ಮುಂದಿನ ವಾರಗಳಲ್ಲಿ ನನ್ನ ವಿಸಿಟಿಂಗ್ ಕಾರ್ಡ್‌ನಲ್ಲಿ ನಮೂದಿತವಾಗಿದ್ದ ಕಾರ್ಖಾನೆಯ ಅಧಿಕೃತ ಮೊಬೈಲಿಗೆ ಪ್ರತಿದಿನವೂ ಬೆಳಿಗ್ಗೆ ಗುಡ್ ಮಾರ್ನಿಂಗ್.. ಹೇಮಾ ಮತ್ತು ರಾತ್ರಿ ಗುಡ್ ನೈಟ್.. ಹೇಮಾ ಎಂಬ ಮೆಸೇಜುಗಳು ಬಂದು ಬೀಳತೊಡಗಿದವು. ಸೋಮವಾರದ ಬೆಳಿಗ್ಗೆ ಬಸ್ಸು ಹತ್ತುವ ವೇಳೆಗೆ 'ಬಸ್ಸು ಹೊರಟಿದೆಯಾ..? ಈಗ ಎಲ್ಲಿ ಬರುತ್ತಿದೆ..?' ಎಂದು ಕನ್ನಡವನ್ನೇ ಇಂಗ್ಲೀಷಿನಲ್ಲಿ ಟೈಪಿಸಿದ ಮೆಸೇಜುಗಳೂ ಶುರುವಾದವು. ನಾನು ಅವಳ ಯಾವ ಮೆಸೇಜುಗಳಿಗೂ ಉತ್ತರಿಸುವ ಗೋಜಿಗೆ ಹೋಗದೆ ಅವುಗಳನ್ನೆಲ್ಲಾ ತಲುಪಿದ ಕ್ಷಣವೇ ಅಳಿಸಿ ಹಾಕುತ್ತಿದ್ದೆ. ಅವಳು ಬಸ್ಸು ಹತ್ತಿದಾಗ ನನ್ನ ಮೆಸೇಜು ತಲುಪಲಿಲ್ಲವಾ.. ಎಂದು ಪ್ರಶ್ನಿಸುವ ಧೈರ್ಯವನ್ನೂ ಮಾಡುತ್ತಿರಲಿಲ್ಲ.

ಹೀಗೆ ಮೂರ್ನಾಲ್ಕು ತಿಂಗಳುಗಳು ಕಳೆದ ಮೇಲೆ ಮದ್ದೂರಿನಲ್ಲಿ ಬಸ್ಸು ಹತ್ತಿದವಳು ನನ್ನನ್ನು ಹುಡುಕಿಕೊಂಡು ಬಂದು 'ಹೇಗಿದ್ದೀರಾ..?' ಎಂದು ಕೇಳುವುದಲ್ಲದೆ ನನ್ನ ಪಕ್ಕದಲ್ಲಿ ಯಾರಾದರೂ ಕುಳಿತಿದ್ದರೆ 'ಪ್ಲೀಸ್.. ಸ್ವಲ್ಪ ಅಲ್ಲಿ ಕುಳಿತುಕೊಳ್ಳುತ್ತೀರಾ..' ಎಂದು ಖಾಲಿ ಸೀಟುಗಳ ಕಡೆ ಕೈತೋರಿಸಿ ಅವರನ್ನು ಜಾಗ ಖಾಲಿ ಮಾಡಿಸಿ ನನ್ನ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದಳು. ನನ್ನ ಪಕ್ಕದಲ್ಲಿ ಕುಳಿತಿದ್ದವರು ಹುಡುಗಿಯೆಂಬ ಕಾರಣಕ್ಕೋ, ಪರಿಚಯವಿದವರು ಕುಳಿತುಕೊಳ್ಳಲಿ ಎಂಬ ಕಾರಣಕ್ಕೋ ಸೀಟು ಬಿಟ್ಟು ಖಾಲಿ ಸೀಟಿಗೆ ತೆರಳುತ್ತಿದ್ದರು. ಇದರಿಂದ ನನಗೆ ಅತೀವ ಇರಿಸುಮುರಿಸಾಗುತಿತ್ತು. ಆದರೂ ಹೇಗೋ ಸಹಿಸಿಕೊಳ್ಳುತ್ತಿದ್ದೆ. ಇದು ನಾನು ಮಾಡಿದ ಮೂರನೆಯ ತಪ್ಪು.

**(ಸಶೇಷ)**